**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 118/2019**

ಪ್ರಾ.ಸಾ. 14

ಚಾ.ಸಾ. 22

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 24.12.2025**

| | |
|---|---|
| ಸಾಕ್ಷಿದಾರರ ಹೆಸರು | ಸುಕಂದರಾಜು |
| ತಂದೆಯ ಹೆಸರು | ಲೇಟ್ ಬಸಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ಎ ಎಸ್ ಐ, ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ | ಕೆ.ಆರ್.ಪೇಟೆ |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2012 ರಿಂದ 2017 ರವರೆಗೆ ಮುಖ್ಯ ಪೇದೆಯಾಗಿ ಮದ್ದೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 25.12.2016 ರಂದು ನನಗೆ ಅಪರಾಧ ಪತ್ತೆ ಕರ್ತವ್ಯಕ್ಕೆ ನೇಮಕವಾಗಿತ್ತು. ಅದರಂತೆ ಆ ದಿನ ರೌಂಡ್ಸ್ ಮುಗಿಸಿ ಸಂಜೆ 7.30 ಗಂಟೆಗೆ ಠಾಣೆಗೆ ಬಂದಿರುತ್ತೇನೆ. ಠಾಣೆಗೆ ಬಂದಾಗ ಠಾಣಾ ಸಿಬ್ಬಂದಿಗಳು ಮದ್ದೂರು

ಸರ್ಕಾರಿ ಆಸ್ಪತ್ರೆ ಬಳಿ ಸಾರ್ವಜನಿಕರು ಗುಂಪು ಕಟ್ಟಿಕೊಂಡು ಗಲಾಟೆ ಮಾಡುತ್ತಿದ್ದಾರೆಂದು ತಿಳಿಸಿದರು. ನಾನು ಕೂಡಲೇ ನಮ್ಮ ಠಾಣಾ ಸಿಬ್ಬಂದಿ ಶಿವಕುಮಾರ್ ರವರನ್ನು ಜೊತೆಗೆ ನಮ್ಮ ಸರ್ಕಾರಿ ಬೈಕಿನಲ್ಲಿ ಕರೆದುಕೊಂಡು ಮದ್ದೂರು ಸರ್ಕಾರಿ ಆಸ್ಪತ್ರೆ ಬಳಿ ಹೋದೆ. ನಾನು ಅಲ್ಲಿ ನೋಡಿದಾಗ ತುಂಬಾ ಜನ ಸೇರಿದ್ದರು. ಆಸ್ಪತ್ರೆಯ ಒಳಗೆ ವೈದ್ಯರ ಕೊಠಡಿಯ ಬಳಿ ಕೆಲವರು ಗಲಾಟೆ ಮಾಡುತ್ತಿದ್ದರು. ನಾನು ಮತ್ತು ನಮ್ಮ ಸಿಬ್ಬಂದಿ ವೈದ್ಯರ ಕೊಠಡಿ ಒಳಗೆ ಹೋಗಿ ನೋಡಿದಾಗ ಮೂರು ಜನ ಯುವಕರಿಗೆ ವೈದ್ಯರು ಚಿಕಿತ್ಸೆ ಕೊಡುತ್ತಿದ್ದರು. ಅವರನ್ನು ವಿಚಾರಿಸಲಾಗಿ ಅವರು ತಮ್ಮ ಹೆಸರು ಮುತ್ತುರಾಜು, ಶಿವು, ಹೇಮಂತ್ ಎಂದು ತಿಳಿಯಿತು. ಮುತ್ತುರಾಜುಗೆ ತಲೆಯ ಮುಂಭಾಗ, ಹಿಂಭಾಗ, ಬಲಭಾಗ ಹಾಗೂ ಎಡಕೈ ಹಾಗೂ ಎಡಕಾಲಿಗೆ ಏಟಾಗಿತ್ತು. ವೈದ್ಯರು ಹೊಲಿಗೆ ಹಾಕುತ್ತಿದ್ದರು. ಹೇಮಂತನಿಗೆ ಎಡತಲೆ ಮತ್ತು ಎಡಕೈಗೆ ಏಟಾಗಿ ಬ್ಯಾಂಡೇಜ್ ಹಾಕಿದ್ದರು. ಶಿವುನನ್ನು ವಿಚಾರಿಸಲಾಗಿ ಅವನಿಗೆ ದಡಿಯಿಂದ ಹೊಡೆದಿದ್ದು, ರಕ್ತಗಾಯ ಆಗುವ ನೋವು ಆಗಿಲ್ಲ ಎಂದು ಹೇಳಿದ. ನಂತರ ಆಸ್ಪತ್ರೆಯ ಹೊರಭಾಗದಲ್ಲಿ ಜೋರಾಗಿ ಗಲಾಟೆಯಾಗುತ್ತಿರುವುದು ಕೇಳಿಸಿತು. ವೈದ್ಯರ ಕೊಠಡಿಯ ಕಿಟಕಿಯ ಗಾಜುಗಳನ್ನು ಸಾರ್ವಜನಿಕರು ಹೊಡೆದು, ಒಳಗಿರುವ ಆ ಮಕ್ಕಳನ್ನು ಹೊರಗೆ ಕಳುಹಿಸಿ ಕೊಚ್ಚಿ ಹಾಕುತ್ತೇವೆ ಎಂದು ಹೇಳುತ್ತಿದ್ದರು. ಅಷ್ಟರಲ್ಲಿ ನಮ್ಮ ಠಾಣಾ ಸಿಬ್ಬಂದಿ ವಿಜಯ್ ಕುಮಾರ್ ರವರು ವೈದ್ಯರ ಕೊಠಡಿಯ ಒಳಗೆ ಬಂದು, ಏಟಾಗಿದ್ದ ಮುತ್ತುರಾಜು, ಶಿವು, ಹೇಮಂತ್ ಚಾಸಾ.1 ರಿಂದ ಚಾಸಾ.3 ರವರನ್ನು ಕುರಿತು ಏನ್ರೋ ಒಂದೇ ಏಟಿಗೆ ಎರಡು ಕೆಡವಿದ್ದೀರಿ, ಆಸ್ಪತ್ರೆಯ ಸುತ್ತ ತುಂಬಾ ಜನ ಸೇರಿ ಗಲಾಟೆ ಮಾಡುತ್ತಿದ್ದಾರೆ, ನೀವು ಆಚೆ ಹೋದರೆ ನಿಮ್ಮನ್ನು ಮುಗಿಸುತ್ತಾರೆಂದು ಹೇಳಿದರು. ಆಗ ನಾವು ಸದರಿ ಚಾಸಾ.1 ರಿಂದ ಚಾಸಾ.3 ರವರನ್ನು ಬೀರುವಿನ ಪಕ್ಕ ಕೂರಿಸಿ ಅಡಗಿಸಿದೆವು. ಅಷ್ಟರಲ್ಲಿ ಕಿಟಕಿಯ ಬಳಿ ನಮ್ಮ ಡಿ ವೈ ಎಸ್ ಪಿ ರವರು ಚಾಸಾ.1 ರಿಂದ ಚಾಸಾ.3 ರವರನ್ನು ಒಬ್ಬೊಬ್ಬರನ್ನೇ ಕರೆದುಕೊಂಡು ಹೊರಗಡೆ ತಂದು ಡಿ ಆರ್ ವ್ಯಾನ್ ನಲ್ಲಿ ಹತ್ತಿಸಿದರು. ಅಲ್ಲಿಂದ ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಮದ್ದೂರು ಆಸ್ಪತ್ರೆಗೆ ಹೋದಾಗ ನೋಡಿದ ಚಾಸಾ.1 ರಿಂದ ಚಾಸಾ.3 ರವರನ್ನು

ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಎರಡು ಭಾವಚಿತ್ರಗಳನ್ನು ನೋಡಿ ಒಂದು ಭಾವಚಿತ್ರದಲ್ಲಿ ನನ್ನ ಜೊತೆ ಕಾಣುತ್ತಿರುವ ತಲೆಗೆ ಬ್ಯಾಂಡೇಜ್ ಹಾಕಿರುವ ವ್ಯಕ್ತಿ ಚಾಸಾ.1 ಮುತ್ತುರಾಜು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ.17 ಎಂದು ತಕರಾರಿಗೆ ಒಳಪಟ್ಟು ಗುರುತಿಸಲಾಯಿತು. ಈ ಹಂತದಲ್ಲಿ ಆರೋಪಿಗಳ ಪರ ವಕೀಲರನ್ನು ನಿಪಿ.17 ಅನ್ನು ಗುರುತಿಸಲು ತಕರಾರು ಒಡ್ಡಿದ್ದು, ತಕರಾರಿಗೆ ಒಳಪಟ್ಟು ನಿಶಾನೆಯಾಗಿ ಗುರುತಿಸಲಾಯಿತು. ಸಾಕ್ಷಿ ಇನ್ನೊಂದು ಭಾವಚಿತ್ರ ನೋಡಿ ಮಧ್ಯದಲ್ಲಿ ಕೆಳಗೆ ಕುಳಿತಿರುವ ವ್ಯಕ್ತಿ ಶಿವ ಎಂದು ನುಡಿಯುತ್ತಾರೆ. ಆತನ ಬಲಭಾಗಕ್ಕೆ ಕೆಂಪು ಟೀ ಶರ್ಟ್ ಧರಿಸಿದವನ್ನು ಹೇಮಂತ್, ಎಡಭಾಗಕ್ಕೆ ಕುಳಿತವ ಮುತ್ತುರಾಜ್ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನೂ ಕೂಡ ಆರೋಪಿಗಳ ಪರ ವಕೀಲರ ತಕರಾಗಿಗೆ ಒಳಪಟ್ಟು ನಿಪಿ.18 ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿದ್ದೇನೆ.

.

**ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

1. ಆಸ್ಪತ್ರೆಯ ಪಕ್ಕ ನೂರಾರು ಜನ ಸೇರಿದ್ದರು ಮತ್ತು ಆ ದಿನ ಬೆಂಗಳೂರು–ಮೈಸೂರು ರಾಷ್ಟೀಯ ಹೆದ್ದಾರಿಗೆ ಕೂಡ ಜನ ಸೇರಿ ತಡೆ ಒಡ್ಡಿದ್ದರು ಎಂದರೆ ಈಗ ಮರೆತು ಹೋಗಿದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಆ ದಿನ ವೈದ್ಯರ ಕೊಠಡಿಯ ಒಳಗೆ ಚಾಸಾ.1 ರಿಂದ ಚಾಸಾ.3 ಮಾತ್ರ ಇದ್ದರು. ಯೋಗರಾಜು ಎಂಬುವವರು ಇರಲಿಲ್ಲ. ನಾನು ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಯಲ್ಲಿ ಮುತ್ತುರಾಜು, ಯೋಗರಾಜು ಮತ್ತು ಹೇಮಂತ್ ಎಂದು ಹೇಳಿದ್ದೇನೆ ವಿನಃ ಶಿವು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಶಿವು ಎಂಬುವನನ್ನು ನಾನು ವಿಚಾರಿಸಿಲ್ಲ, ಬದಲಾಗಿ ಯೋಗರಾಜು ಎಂಬುವವನ್ನು ವಿಚಾರಿಸಿದೆ ಎಂದರೆ ಸರಿಯಲ್ಲ. ಯೋಗರಾಜು ಎಂಬುವವನ್ನು ವಿಚಾರಿಸಿದಾಗ ದಡಿಗಳಿಂದ ಹೊಡೆದಿದ್ದಾರೆ ಗಾಯವೇನಾಗಿಲ್ಲ ಎಂದು ಹೇಳಿದ ಎಂದು ನಾನು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯ ಸಾಕ್ಷಕ್ಕೂ ಕಲಂ 161 ಸಿ ಆರ್ ಪಿ ಸಿ ಹೇಳಿಕೆಗೂ ವ್ಯತಿರಿಕ್ತತೆ ಇರುವ ಕಾರಣ ಸದರಿ ಭಾಗವನ್ನು ನಿಡಿ.1 ಎಂದು

ಗುರುತಿಸಲಾಯಿತು. ಗಲಾಟೆಯಾದಂತಹ ಸಮಯದಲ್ಲಿ ನಮ್ಮ ಠಾಣೆಯಲ್ಲಿ ಮೋಹನ್ ಡಿ ಪಟೇಲ್ ಎಂಬುವವರು ಪಿ ಎಸ್ ಐ ಆಗಿದ್ದರು ಎಂದರೆ ಸರಿ. ಕೆ.ಆರ್.ಪ್ರಸಾದ್ ಎಂಬುವವರು ವೃತ್ತ ನಿರೀಕ್ಷಕರಾಗಿದ್ದರು ಎಂದರೆ ಸರಿ. ತನಿಖಾಧಿಕಾರಿಗಳಾದ ವೃತ್ತ ನಿರೀಕ್ಷರ ಆದೇಶದಂತೆ ನಾನು ಹಾಗೂ ಇತರೆ ಸಿಬ್ಬಂದಿ ಮೋಹನ್ ಡಿ ಪಟೇಲ್ ರವರ ಜೊತೆಗೆ ಹೋಗಿ ಎಸ್ ಸಿ ಸಂಖ್ಯೆ 82/2017 ರ ಆರೋಪಿಗಳಾದ 1 ನೇ ಆರೋಪಿ ಟಿ.ಎಸ್.ಮುತ್ತುರಾಜು, 4 ನೇ ಆರೋಪಿ ಟಿ.ಡಿ.ದೀಪಕ್, 5 ನೇ ಆರೋಪಿ ಟಿ.ಡಿ.ಯೋಗೇಶ್ ಅಲಿಯಾಸ್ ಯೋಗರಾಜು, 6 ನೇ ಆರೋಪಿ ಟಿ.ಡಿ.ಸ್ವಾಮಿ, 7 ನೇ ಆರೋಪಿ ಟಿ.ಡಿ.ಶಿವರಾಜು, 8 ನೇ ಆರೋಪಿ ಟಿ.ಕೆ.ಶಿವಣ್ಣ, 11 ನೇ ಆರೋಪಿ ಟಿ.ಎನ್.ಹೇಮಂತ್ ಕುಮಾರ್, 17 ನೇ ಆರೋಪಿ ಕುಮಾರ, 19 ನೇ ಆರೋಪಿ ಟಿ.ಎನ್.ಶಿವು ಮತ್ತು 20 ನೇ ಆರೋಪಿ ಟಿ.ಎಸ್.ಪ್ರಸನ್ನ ಇವರನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದು ತನಿಖಾಧಿಕಾರಿಗಳ ಮುಂದೆ ತಂದು ಹಾಜರುಪಡಿಸಿದೆ ಎಂದರೆ ಈಗ ಜ್ಞಾಪಕವಿಲ್ಲ. ಎಸ್ ಸಿ ಸಂಖ್ಯೆ 82/2017 ರಲ್ಲಿ ನನ್ನನ್ನು ಚಾಸಾ.72 ಮತ್ತು ಮೋಹನ್ ಡಿ ಪಟೇಲ್ ರನ್ನು ಚಾಸಾ.75 ಎಂದು ಅಂತಿಮ ವರದಿಯಲ್ಲಿ ಸಾಕ್ಷಿಯಾಗಿ ಮಾಡಿದ್ದಾರೆಂದರೆ ಈಗ ಗೊತ್ತಿಲ್ಲ. ಈ ಪ್ರಕರಣದ 1 ನೇ ಆರೋಪಿ ಹೊನ್ನಯ್ಯ ಮತ್ತು ಗಾಯಾಳು ಚನ್ನೇಗೌಡರವರು ಮೈಸೂರು ಕೆ.ಆರ್. ಆಸ್ಪತ್ರೆಯಲ್ಲಿ ಅವರಿಗೆ ಆದ ಗಾಯಗಳ ಬಾಬ್ತು ಚಿಕಿತ್ಸೆ ಪಡೆಯುತ್ತಿದ್ದಾಗ ಮೋಹನ್ ಡಿ ಪಟೇಲ್ ಅಲ್ಲಿಗೆ ಹೋಗಿ 1 ನೇ ಆರೋಪಿಯ ಹೇಳಿಕೆ ದಾಖಲಿಸಿಕೊಂಡಿದ್ದರು ಎಂದರೆ ಗೊತ್ತಿಲ್ಲ. 1 ನೇ ಆರೋಪಿಯ ಹೇಳಿಕೆಯ ಮೇರೆಗೆ ನಮ್ಮ ಠಾಣೆಯಲ್ಲಿ 20 ಜನ ಆರೋಪಿಗಳ ವಿರುದ್ಧ ಕ್ರೈಂ ನಂ.582/2016 ರಂತೆ ಪ್ರಕರಣ ದಾಖಲು ಆದ ವಿಚಾರ ನನಗೆ ಗೊತ್ತಿಲ್ಲ. ಗಲಾಟೆಯಾದ ನಂತರ ಸದರಿ ಪ್ರಕರಣ ನಡೆದ ಬಳಿಕ ನಾನು ಮೂರು ತಿಂಗಳು ಮದ್ದೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದೆ. ನಾನು ಆ ಮೂರು ತಿಂಗಳು ಮದ್ದೂರು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಎಸ್ ಸಿ ಸಂಖ್ಯೆ 82/2017 ರ 20 ಜನ ಆರೋಪಿಗಳಲ್ಲಿ ಯಾರನ್ನೂ ಕೂಡ ನನ್ನ ಉಪಸ್ಥಿತಿಯಲ್ಲಿ ವಶಕ್ಕೆ ಪಡೆದು, ವಿಚಾರಣೆ ಮಾಡಿದ್ದು ನೋಡಿಲ್ಲ. ವೈದ್ಯರ ಕೋಣೆಯಲ್ಲಿದ್ದ ಮುತ್ತುರಾಜು, ಹೇಮಂತ್ ಮತ್ತು ಶಿವು ಇವರು ಅವರಿಗೆ

ಯಾರು ಹೊಡೆದರು ಎಂದು ನನ್ನಲ್ಲಿ ಹೇಳಿಲ್ಲ ಆದರೆ ವಿಜಯ್ ಕುಮಾರ್ ಬಳಿ ಚನ್ನೇಗೌಡ, ಕೆಂಗಲ್ ಗೌಡ ಮತ್ತು ಮಹೇಂದ್ರ ಹಾಗೂ ಅವರ ಕಡೆಯವರು ಹೊಡೆದರು ಎಂದು ಹೇಳಿದರು. ವಿಜಯ್ ಕುಮಾರ್ ಮುಂದೆ ಆ ಮೂರು ಜನ ಯಾರು ಹೊಡೆದರು ಎಂದು ಹೇಳಿದ್ದನ್ನು ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡುವಾಗ ಹೇಳಿದ್ದೇನೆ. ನಾನು ಜುಲೈ 2017 ರವರೆಗೆ ಮದ್ದೂರು ಠಾಣೆಯಲ್ಲಿದ್ದೆ. ಎಸ್ ಸಿ 82/2017 ರಲ್ಲಿ ತನಿಖೆ ಸಮಯದಲ್ಲಿ ತನಿಖಾಧಿಕಾರಿ ವೃತ್ತ ನಿರೀಕ್ಷಕರ ಮುಂದೆ ನಾನು ಹೇಳಿಕೆ ನೀಡುವಾಗ ಈ ಕೇಸಿನ 1 ರಿಂದ 3 ನೇ ಆರೋಪಿಗಳು ಚಾಸಾ.1 ರಿಂದ ಚಾಸಾ.3 ರವರಿಗೆ ಹೊಡೆದಿದ್ದು ಎಂದು ಚಾಸಾ.1 ರಿಂದ 3 ರವರು ವಿಜಯ್ ಕುಮಾರ್ ಬಳಿ ಹೇಳಿದ್ದಾರೆಂದು ನಾನು ಹೇಳಿಲ್ಲ. ನನ್ನ ಸಮಕ್ಷಮ ಚಾಸಾ.1 ರಿಂದ ಚಾಸಾ.3 ರವರು ವಿಜಯ್ ಕುಮಾರ್ ಬಳಿ ಈ ಪ್ರಕರಣದ 1 ರಿಂದ 3 ನೇ ಆರೋಪಿಗಳು ಹೊಡೆದಿದ್ದಾರೆಂದು ಹೇಳಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ತೊಪ್ಪನಹಳ್ಳಿ ಗ್ರಾಮದ ಅರಳೀಕಟ್ಟೆಯ ಬಳಿ ನಡೆದ ಗಲಾಟೆಯಲ್ಲಿ ಈ ಆರೋಪಿಗಳ ಕಡೆಯವರಾದ 4 ನೇ ಆರೋಪಿ ಮುತ್ತುರಾಜು ಮತ್ತು 6 ನೇ ಆರೋಪಿ ನಂದೀಶರವರು ಮೃತಪಟ್ಟ ವಿಚಾರ ನನಗೆ ಗೊತ್ತು. ಆರೋಪಿ 4 ಮತ್ತು 6 ನೇ ಆರೋಪಿಗಳು ಕೊಲೆಯಾದ ಬಗ್ಗೆ ಮತ್ತು 1 ನೇ ಆರೋಪಿ ಹಾಗೂ ಚನ್ನೇಗೌಡ ರಿಗೆ ತೀವ್ರ ಗಾಯವಾದ ಬಗ್ಗೆ 20 ಜನ ಆರೋಪಿಗಳ ಮೇಲೆ ಪ್ರಕರಣ ದಾಖಲು ಆಗಿ ಅಂತಿಮ ವರದಿ ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ತನಿಖಾಧಿಕಾರಿ ಎಸ್ ಸಿ 82/2017 ರಲ್ಲಿ ನನ್ನನ್ನು ಸಾಕ್ಷಿಯಾಗಿ ಮಾಡಿದ ವಿಚಾರ ಗೊತ್ತು. ನನಗೆ ಈ ಪ್ರಕರಣದ ವಸ್ತುಸ್ಥಿತಿ ಗೊತ್ತಿಲ್ಲ, ಸಿಐಡಿ ರವರು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *5 , 7* ರಿಂದ *14* ನೇ ಆರೋಪಿತರ ಪರ ಶ್ರೀ ಹೆಚ್ ಎಂ ಎನ್ ವಕೀಲರಿಂದಃ**

1 ರಿಂದ 3 ನೇ ಆರೋಪಿ ಪರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.